(ಗೊಂದಲ)

**ಶ್ರೀ ಸಿ.ಟಿ. ರವಿ:** ಮಾನ್ಯ ಅಧ್ಯಕ್ಷರೆ, ನಾನಿಲ್ಲಿ ಚರ್ಚೆ ಮಾಡುತ್ತಿಲ್ಲ. ಇವತ್ತು ದಿನಾಂಕ 24–7–2009 ಆಗಿದೆ. ನೀವು ರೇಷನ್ ಕೊಡುವುದರೊಳಗೆ 31ನೇ ತಾರೀಖು ಆಗಿರುತ್ತದೆ. ದಿನಾಂಕ 31–7–2009ರಂದು ಅಕೌಂಟ್ಸ್ ಕ್ಲೋಸ್ ಮಾಡುತ್ತಾರೆ. ಇದನ್ನು ಮುಂದಿನ ತಿಂಗಳವರೆಗೂ ಮುಂದುವರೆಸುವಂತೆ ಮಾಡಬೇಕು.

**ಶ್ರೀ ಹೆಚ್. ಹಾಲಪ್ಪ:** ಸಿ.ಟಿ. ರವಿ ಮತ್ತು ಇತರ ಸದಸ್ಯರು, 27ನೇ ತಾರೀಖಿನಿಂದ ನೀವು 4 ದಿವಸ ಕೊಟ್ಟರೆ ಜನರಿಗೆ ಸರಿಯಾಗಿ ಮುಟ್ಟುವುದಿಲ್ಲವೆಂದು ಹೇಳುವುದು ಸರಿ ಇದೆ. ಸಾಧ್ಯವಾದರೆ, ಒಂದು ವಾರ, ಮುಂದಿನ ತಿಂಗಳು ಅಕೌಂಟ್ ಕ್ಲೋಸ್ ಮಾಡದೆ, ಮುಂದಿನ ಒಂದು ವಾರದಲ್ಲೂ ಕೂಡ ಬಂದಂಥ ಅಕ್ಕಿಯನ್ನು ಕೊಡಿಸುವಂಥ ವ್ಯವಸ್ಥೆಯನ್ನು ಮಾಡಲಾಗುವುದು.

## ಮಿನಿಸ್ಟ್ರಿ ಆಫ್ ಕಮ್ಯೂನಿಕೇಷನ್ ಸಹಕಾರ ಗೃಹ ನಿರ್ಮಾಣ ಸಹಕಾರ ಸಂಘವು ಪಡೆದಿರುವ ಜಮೀನಿನ ಬಗ್ಗೆ

1012 ಶ್ರೀ ಮಂಜು ಎ. ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಿನಿಸ್ಟ್ರೀ ಆಫ್ ಕಮ್ಯೂನಿಕೇಷನ್ ಸಹಕಾರ ಗೃಹ ನಿರ್ಮಾಣ ಸಂಘವು ಬೆಂಗಳೂರು ಉತ್ತರಹಳ್ಳಿ, ಜಾಲ ಹೋಬಳಿ ಬರುವ ಹೊಸಹಳ್ಳಿ ಗ್ರಾಮ ಹಾಗೂ ಬಾಗಲೂರು ಗ್ರಾಮಗಳಲ್ಲಿ ಪಡೆದಿರುವ ಜಮೀನು ಎಷ್ಟು (ಸರ್ವೆ ಸಹಿತ ವಿವರ ನೀಡುವುದು);

ಆ) ಈ ಮೇಲ್ಕಂಡ ಮೂರು ಗ್ರಾಮಗಳಲ್ಲಿ ಭೂ ಪರಿವರ್ತನೆ ಆಗಿರುವ ಸರ್ವೆ ನಂಬರ್‌ಗಳ ವಿವರ ಹಾಗೂ ವಿಸ್ತೀರ್ಣದ ಬಗ್ಗೆ ಮಾಹಿತಿ ನೀಡುವುದು?

**ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):**

ಅ) ಮಿನಿಸ್ಟ್ರಿ ಆಫ್ ಕಮ್ಯುನಿಕೇಷನ್ ಗೃಹ ನಿರ್ಮಾಣ ಸಹಕಾರ ಸಂಘವು ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಇಲ್ಲಿ ಬರುವ ಹೊಸಹಳ್ಳಿ ಗ್ರಾಮ ಹಾಗೂ ಬಾಗಲೂರು ಗ್ರಾಮಗಳಲ್ಲಿ ಯಾವುದೇ ಜಮೀನು ನೇರವಾಗಿ ಖರೀದಿಸಿರುವುದಿಲ್ಲ. ಸಂಘವು ಈ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಡಾವಣೆಯಲ್ಲಿ ಎಲ್ಲಾ ಸೌಕರ್ಯ ಹೊಂದಿದ 'ಶುದ್ಧ ನಿವೇಶನ'ಗಳನ್ನು ಟರ್ನ್‌ಕೀ ಆಧಾರದ ಮೇಲೆ ಸಂಘದ ಸದಸ್ಯರಿಗೆ ಒದಗಿಸುವ ಸಲುವಾಗಿ

ಮೆ॥ ಎಂ.ಸಿ.ಎನ್. ಡೆವಲಪರ್ಸ್ ಅವರೊಂದಿಗೆ ದಿನಾಂ 1–7–2004ರಂದು ಕರಾರು ಮಾಡಿಕೊಂಡಿರುತ್ತದೆ.

ಆ) ಹೊಸಹಳ್ಳಿ ಗ್ರಾಮದಲ್ಲಿ ಮೆ॥ ಎಂ.ಸಿ.ಎನ್. ಡೆವಲಪರ್ಸ್ ಅವರು ಸ್ವತಃ ಜಮೀನನ್ನು ಖರೀದಿಸಿ 72 ಎಕರೆ 2 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿದ್ದು ಈ ರೀತಿ ಭೂ ಪರಿವರ್ತನೆಯಾದ ಜಮೀನುಗಳನ್ನು ಸಂಘದ ಹಿತದೃಷ್ಟಿಯಿಂದ ಭದ್ರತೆಯ ನಿಟ್ಟಿನಲ್ಲಿ ಸಂಘದ ಹೆಸರಿಗೆ ನೋಂದಾಯಿಸಿ ಕೊಳ್ಳಲಾಗಿದೆ. ಇದರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

**ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಂಜು ಎ. ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1012ಕ್ಕೆ ಅನುಬಂಧ**

**Ministry of Communications Employees Co-operative Housing Society Limited**

**No. 33, Serpentime Road, 12th Block, K.P. West Extn, Bangalore-560 020 Converted Lands at Hosahalli Village have been purchased and registered in favour PF Society**

| Sl. No. | Sy. No. | Extent | Name | Regn No. | Date |
|---|---|---|---|---|---|
| 1 | 2 | 3 | 4 | 5 | 6 |
| 1 | 19/2 | 1.07 | B. Srinivasaiah M. Motappa | 8994 | 16-12-05 |
| 2 | 21 | 2.00 | K.M. Naveen/ Appayanna | 8974 | 16-12-05 |
| 3 | 21 | 4.00 | K.M. Naveen/ Chokkamma | 8971 | 16-12-05 |
| 4 | 21p13 | 2.00 | Abdul Rehman B | 3495 | 4-6-05 |
| 5 | 23/4 | 0.191/2 | Munikrishnappa | 19552 | 31-12-04 |
| 6 | 23/9 | 0.20 | Munikrishnappa | 19552 | 31-4-04 |
| 7 | 24/1 | 1.00 | R. Krishnappa | 19542 | 31-12-04 |

| 1 | 2 | 3 | 4 | 5 | 6 |
|---|---|---|---|---|---|
| 8 | 24/3 | 0.36 | Seetharamaiah | 19547 | 31-4-04 |
| 9 | 25 | 6.27 | Ramakrishnappa | 3485 | 4-6-05 |
| 10 | 30 | 0.33 | S. Krishnamurthy | 19520 | 31-12-04 |
| 11 | 30 | 1.26 | S.P. Shesha chalam | 19529 | 31-12-04 |
| 12 | 30 | 0.33 | B. Srinivasaiah/ N. Naganna | 9003 | 16-12-05 |
| 13 | 32/1 | 2.37 | C. Narasimhaiah | 19567 | 31-12-04 |
| 14 | 34/3 | 0.28 | C. Narasimhaiah | 19567 | 31-12-04 |
| 15 | 35/1B | 0.07 | C. Narasimhaiah | 19567 | 31-12-04 |
| 16 | 35/4 | 2.16 | B. Nanjunhaiah | 19508 | 31-12-04 |
| 17 | 35/6 | 2.01 | C. Narasimhaiah | 19567 | 31-12-04 |
| 18 | 39/2 | 2.26 | B. Srinivasaiah/ R. Ramakrishnappa | 8987 | 16-12-05 |
| 19 | 42 | 2.03 | Ansar Pasha | 19556 | 31-12-05 |
| 20 | 45/3 | 2.211/2 | B. Srinivasaiah/ R. Narasimha Reddy | 8980 | 16-12-05 |
| 21 | 47/5 | 0.13 | K.M. Chethan/ S. Nisar | 8984 | 16-12-05 |
| 22 | 49/6 | 0.341/2 | Muniyappa | 3494 | 4-6-05 |
| 23 | 50/4 | 1.00 | B.Srinivasaiah/ Mohammed, Ahmed/ Amir | 8977 | 16-12-05 |

| 1 | 2 | 3 | 4 | 5 | 6 |
|---|---|---|---|---|---|
| 24 | 50/5 | 1.01 | Jayed Unnissa | 19537 | 31-12-04 |
| 25 | 58/5 | 0.19 | TAjunnissa | 19558 | 31-12-04 |
| 26 | 108/1 | 0.36 | B. Srinivasaiah/ Dr. M. Subba Reddy | 8991 | 16-12-05 |
| 27 | 112 | 0.23 | B. Srinivasaiah/ Dr. M. Subba Reddy | 8991 | 16-2-05 |
| 28 | 122/2 | 1.14 | Renukamma | 19557 | 31-12-04 |
| 29 | 126/3apl | 1.00 | M. Jagadsh | 3486 | 4-6-05 |
| 30 | 149 | 1.37 | Mustalla | 3489 | 4-6-05 |
| 31 | 150 | 3.14 | Anjinappa M | 9001 | 16-12-05 |
| 32 | 152 | 1.31 ½ | B. Srinivasaiah/ Rafeex Khan | 8997 | 16-12-05 |
| 33 | 153 | 2.12 | J. Prithvi Reddy | 3498 | 4-6-05 |
| 34 | 153 | 2.00 | Venkatalakshmamma | 3492 | 4-6-05 |
| 35 | 164 | 6.05 | J. Prithvi Reddy | 3498 | 4-6-05 |
| 36 | 167 | 4.00 | S.M. Nagaraju | 19513 | 31-12-04 |
| 37 | 168 | 4.00 | S.M. Nagaraju | 19513 | 31-12-04 |
| 38 | 169 | 0.11 | S.M. Nagaraju | 19513 | 31-12-04 |
| 39 | 73p7 | 1.10 | J. Prithvi Reddy | 11487 | 27-1-06 |
| | | 72.02 | | | |

**ಶ್ರೀ ಎ. ಮಂಜು:** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ದಿನಾಂಕ 1–7–2004ರಲ್ಲಿ ಜಮೀನಿನ ಕರಾರು ಮಾಡಿಕೊಂಡಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಇಲ್ಲಿ ಗಮನಿಸಬೇಕು, ನಾನು ಕೇಳಿರುವ ಹೊಸಹಳ್ಳಿ ಗ್ರಾಮ ಸಂಬಂಧಿಸಿದಂತೆ 2004ರಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಬಹುಶಃ ನೂರು ರೂಪಾಯಿ ಕಾಗದದಲ್ಲಿ ಅವರು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. 208 ಎಕರೆ 38 ಗುಂಟೆ ಬರುವ ಆ ಹೊಸಹಳ್ಳಿ ಗ್ರಾಮದ ಸರ್ವೆ ನಂಬರ್ ಬೈಯಪ್ಪ ವ್ಯಾಪ್ತಿಯಲ್ಲಿ ಅಗ್ರಿಕಲ್ಚರ್ ಜೋನ್ ಗೆ ಬರುವ ಒಂದು ಗ್ರಾಮ, ಅದು ನಿಮ್ಮ ಗಮನಕ್ಕೆ ಬಂದಿದೆಯೋ ಏನೊ ಗೊತ್ತಿಲ್ಲ. ನಿಮ್ಮ ಹೇಳಿಕೆಯಲ್ಲಿ, 2004ರಲ್ಲಿ "turnkey basis"ನಲ್ಲಿ ನಾವು ಅಗ್ರಿಮೆಂಟ್ ಮಾಡಿಕೊಂಡಿದ್ದೇವೆಂದು ಕೊಟ್ಟಿದ್ದಾರೆ. ನೀವು ಅಗ್ರಿಕಲ್ಚರ್ ಜೋನ್ ಅನ್ನು ಅಲಿನೇಷನ್ನೆ ಮಾಡುವುದಕ್ಕೆ ಆಗುವುದಿಲ್ಲ, ಯಾವ ಆಧಾರದ ಮೇಲೆ ಕನ್ವರ್ಟ್ ಮಾಡಿದ್ದೀರಿ? ನೀವು ಯಾವ ಆಧಾರದ ಮೇಲೆ ಆ ಜಮೀನನ್ನು ಅವರಿಗೆ ಕೊಟ್ಟಿದ್ದೀರಿ, ಯಾವ ರೀತಿ ಅಗ್ರಿಮೆಂಟ್ ಮಾಡಿಕೊಂಡಿದ್ದೀರೆಂದು ಮಾನ್ಯ ಮಂತ್ರಿಗಳು ಮಾಹಿತಿಯನ್ನು ಕೊಡಬೇಕು. ಏಕೆಂದರೆ, ಇದು ಹಗಲು ದರೋಡೆ ಮಾಡುತ್ತಿರುವ ಕೃತ್ಯವಿದು, 2004ರಲ್ಲಿ ಸುಮಾರು 4000 ಜನರಿಂದ ಚದರ ಅಡಿಗೆ ರೂ. 180 ರಂತೆ ಸುಮಾರು 150 ಕೋಟಿ ರೂಪಾಯಿಗಳನ್ನು ಈ ಸೊಸೈಟಿಗೆ ಕಟ್ಟಿಸಿಕೊಂಡಿದ್ದಾರೆ. ಅದಕ್ಕೆ ದಾಖಲೆ ಇಲ್ಲ, ಸರ್ಕಾರ ತಿರಸ್ಕಾರ ಮಾಡಿದೆ, ನಿಮ್ಮದು ಅಗ್ರಿಕಲ್ಚರ್ ಜೋನ್ ಎಂದು ಹೇಳಿದೆ, ಆದಾದರೂ ಕೂಡ ನೀವು 72 ಎಕರೆ ರಿಜಿಸ್ಟರ್ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ, ತಾವೇನಾದರೂ ತಮ್ಮ ಸೊಸೈಟಿಗೆ, ಅಗ್ರಿಕಲ್ಚರ್ ಜೋನ್ ಮಾಡುವುದು ತಪ್ಪೆಂದು ಅವರೇನಾದರು ನಿಮಗೆ ತಿಳುವಳಿಕೆ ಕೊಟ್ಟಿದ್ದಾರಾ, ಆ ವಿಚಾರವೇನಾದರೂ ನಿಮಗೆ ಗೊತ್ತಿದೆಯೇ ಅಥವಾ ವೈಯಕ್ತಿಕವಾಗಿ ಆ ಸೊಸೈಟಿಗೆ ಸಹಾಯ ಮಾಡಬೇಕು, ಅನುಕೂಲ ಮಾಡಬೇಕೆಂದು ಸಹಕಾರ ಇಲಾಖೆಯವರೇನಾದರೂ ತೀರ್ಮಾನವನ್ನು ತೆಗೆದುಕೊಂಡಿದ್ದೀರಾ? ಈ ಪ್ರಶ್ನೆಗಳಿಗೆ ಉತ್ತರ ಹೇಳಿದರೆ ಮುಂದಿನ ಪ್ರಶ್ನೆಯನ್ನು ಕೇಳಲು ಅನುಕೂಲವಾಗುತ್ತದೆ.

**ಶ್ರೀ ಲಕ್ಷ್ಮಣ್ ಎಸ್ ಸವದಿ:** ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಮಿನಿಸ್ಟರ್ ಆಫ್ ಕಮ್ಯುನಿಕೇಷನ್ ಸಂಘದವರು ಮತ್ತು ಒಬ್ಬ ಡೆಲವಪರ್ ಕೂಡಿ ಜಾಯಿಂಟ್ ಆಗಿ ಮಾಡತಕ್ಕಂಥ ನಿವೇಶನಗಳು ಇವು. ಒಟ್ಟು ಜಮೀನು 350 ಎಕರೆ, ಈಗಾಗಲೇ ರೈತರ ಹೆಸರಿನಲ್ಲಿರುವ ಜಮೀನನ್ನು

ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಆ ಅಗ್ರಿಮೆಂಟ್ ಮಾಡಿಕೊಂಡಿರುವ ಸಂದರ್ಭದಲ್ಲಿ ಅದು ಕೃಷಿಯೇತರ ಜಮೀನಾಗಿತ್ತು. ತದನಂತರ ಕೃಷಿ ಜಮೀನಾಗಿ ಪರಿವರ್ತನೆಗೊಂಡಿತು. ಮತ್ತೆ ಸಂಬಂಧಿಸಿದ ಪ್ರಾಧಿಕಾರದ ಮುಂದೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ, ಮತ್ತೆ ಅದನ್ನು ಯಲ್ಲೊ ಜೋನ್ ಮಾಡಿ ಕೊಡುವ ಸಂದರ್ಭವಿರಬಹುದು ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ಒಂದು ಹಿನ್ನೆಲೆಯಲ್ಲಿ ಅದು ಕೃಷಿಯೇತರ ಜಮೀನಾಗಿ ಪರಿವರ್ತನೆಗೊಂಡ ಮೇಲೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸಂಬಂಧಿಸಿದ ಸದಸ್ಯರಿಗೆ ನಿವೇಶನ ಕೊಡುತ್ತೇವೆನ್ನುವುದನ್ನು ಸಂಘದವರು ನಮಗೆ ಆಗಲೇ ತಿಳಿಸಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ಡೆವಲಪರ್‌ಗೆ ಸುಮಾರು 175 ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಆ ಒಂದು ಕರಾರನ್ನು ಕೂಡ ಸಂಘದವರು ಮತ್ತು ಡೆವಲಪರ್ ಕೂಡಿ ಮಾಡಿ ಕೊಂಡಿರುವುದು ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ 315 ಎಕರೆ ಜಮೀನು ಅದು ಗ್ರೀನ್ ಬೆಲ್ಟ್‌ಗೆ ಬರುತ್ತದೆ, ಅದು ಗ್ರೀನ್ ಬೆಲ್ಟ್‌ಗೆ ಬರುವುದರಿಂದ ಹೇಗೆ ಕನ್ವರ್ಷನ್ ಮಾಡುವುದಕ್ಕೆ ಸಾಧ್ಯವಾಯಿತು, ಅದಕ್ಕೇನಾದರೂ ಅನುಮತಿಯನ್ನು ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದಾರೆ, ಗ್ರೀನ್ ಬೆಲ್ಟ್‌ಗೆ ಬರುತ್ತದೆನ್ನುವ ಉತ್ತರವನ್ನು ನೀವು ಹೇಳಲಿಲ್ಲ. ಅಗ್ರಿಮೆಂಟ್ ಮೇಲೆ ಮಾಡಿಕೊಂಡಿದ್ದೇವೆ ಅಥವಾ ಆಗುತ್ತದೆನ್ನುವ ನಂಬಿಕೆಯನ್ನಿಟ್ಟುಕೊಂಡಿದ್ದೇವೆ ಎಂದು ಹೇಳುವುದು ಉತ್ತರನೇ ಅಲ್ಲ. ಇದು ಗ್ರೀನ್ ಬೆಲ್ಟ್‌ಗೆ ಬರುವುದರಿಂದ ಇದನ್ನು ಹೇಗೆ ಮಾಡಲು ಸಾಧ್ಯ.

**ಶ್ರೀ ಲಕ್ಷ್ಮಣ ಎಸ್ ಸವದಿ:** ಡೆವಲಪರ್ ಆ ಜಮೀನು ಖರೀದಿ ಮಾಡುವ ಸಂದರ್ಭದಲ್ಲಿ ಗ್ರೀನ್ ಬೆಲ್ಟ್‌ನಲ್ಲಿ ಇರಲಿಲ್ಲ, ಅವತ್ತಿನ ದಿವಸ ಅದು ಯಲ್ಲೊ ಜೋನ್‌ನಲ್ಲೇ ಇತ್ತು. ಆ ಒಂದು ಸಂದರ್ಭದಲ್ಲಿ ಅವರು ಅಗ್ರಿಮೆಂಟ್ ಮಾಡಿಕೊಂಡು, ಇವತ್ತು ವಾರಸುದಾರರ ಹೆಸರಿನಲ್ಲಿ ಕೆಲವೊಂದು ಡಾಕ್ಯುಮೆಂಟ್ಸ್ ಕೂಡ ಮಾಡಿದ್ದಾರೆ, ಅದಾದ ನಂತರ ಅದು ಅಗ್ರಿಕಲ್ಚರ್ ಲ್ಯಾಂಡ್ ಎಂದು ಪರಿವರ್ತನೆಗೊಂಡಿರುವುದು. ಪುನಃ ಸಂಬಂಧಿಸಿದ ಪ್ರಾಧಿಕಾರ ಬಂದು ಮನವಿಯನ್ನು ಮಾಡಿಕೊಂಡಿದ್ದಾರೆ, ಕೃಷಿಯೇತರ ಜಮೀನಾಗಿ ಮಾಡಿಕೊಡಿ ಎಂದು, ಇನ್ನು ಆ ಪ್ರಾಧಿಕಾರದ ಮುಂದೆ ಪೆಂಡಿಂಗ್ ಇರುವ ಸಂದರ್ಭದಲ್ಲಿ ನಾವು ಸಂಶಯಪಡುವುದು ಸರಿಯಾದುದ್ದಲ್ಲ, ಅಲ್ಲಿ

ಏನು ತೀರ್ಮಾನ ಬರುತ್ತದೆ, ನಂತರ ನಾವು ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ.

**ಶ್ರೀ ಆರ್. ರೋಷನ್ ಬೇಗ್:** ಡೆವಲಪರ್ ಯಾರು, ಯಾರ್ಯಾರು ರಾಜಕಾರಣಿಗಳು, ಅವರ ಮಕ್ಕಳು ಯಾರು? ಈ ಸಿಎನ್ ಡೆವಲಪರ್ಸ್ ಎಂದರೆ ಯಾರು? ಅದೇನಾದರು ತಮಗೆ ಗೊತ್ತಿದೆಯೇ?

**ಶ್ರೀ ಲಕ್ಷ್ಮಣ ಎಸ್ ಸವದಿ:** ಅದರ ಬಗ್ಗೆ ನೀವು ಪ್ರತ್ಯೇಕವಾದ ಪ್ರಶ್ನೆಯನ್ನು ಕಳುಹಿಸಿಕೊಟ್ಟರೆ, ಯಾರ್ಯಾರು, ಯಾರ್ಯಾರು ವಾರಸುದಾರರು, ಅವರ ಇತಿಹಾಸಗಳನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಟಿ.ಬಿ. ಜಯಚಂದ್ರ:** ಸಿಡಿಪಿ ಅಗಲೇ ಅಪ್ರೂವ್ ಆಗಿರುವುದರಿಂದ, ಅದನ್ನು ಪರಿಶೀಲನೆ ಮಾಡುವ ಅವಕಾಶವಿರುವುದಿಲ್ಲ, ಮನವಿ ಪೆಂಡಿಂಗ್ ಇರಬಹುದೆ ವಿನಃ, ಪರಿಶೀಲನೆ ಮಾಡಲು ಯೋಗ್ಯವಾದ ವಸ್ತು ಆದಾಗಿರುವುದಿಲ್ಲ, ದಯಮಾಡಿ ಅದರ ಬಗ್ಗೆಯೋಚನೆ ಮಾಡಿ, ನೀವು, ಮನವಿ ಮಾಡಿದಾಕ್ಷಣಕ್ಕೆ ಕನ್ಸಿಡರ್ ಮಾಡುವುದಲ್ಲ, ಏಕೆಂದರೆ, Legislature has approved it and Government has pased an order, ಮತ್ತೆ ಮರು ಪರಿಶೀಲನೆ ಮಾಡುವ ಪ್ರಶ್ನೆ ಬರುವುದೇ ಇಲ್ಲ, ಅದು illegal ಆಗುತ್ತದೆ.

**ಶ್ರೀ ಎ. ಮಂಜು:** ಅವರು ಉತ್ತರವನ್ನು ಮರೆ ಮಾಚುತ್ತಿದ್ದಾರೆ, ರಿಜಿಸ್ಟರ್ ಅಗ್ರಿಮೆಂಟ್ ಮಾಡಿಕೊಟ್ಟಿರುವುದಿಲ್ಲ, ಖಾಲಿ ನೂರು ರೂಪಾಯಿ ಪೇಪರ್‌ನಲ್ಲಿ ಅಗ್ರಿಮೆಂಟ್ ಮಾಡಿಕೊಟ್ಟಿರುವುದು, ಇದನ್ನು ಮಾನ್ಯ ಸಚಿವರು, ಗಮನಿಸಿದ್ದಾರೋ ಇಲ್ಲವೋ ಎಂದು ಕೇಳಬೇಕಾಗುತ್ತದೆ. 150 ಕೋಟಿ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಿಸಿದ್ದು ಬರೀ ನೂರು ರೂಪಾಯಿ ಪೇಪರ್‌ನಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಮತ್ತೆ ನಿಮ್ಮ ಇಲಾಖೆಯವರು ಅಡಿಟ್ ರಿಪೋಟ್‌ನಲ್ಲೂ, ಮಾಡಿರುವ ಅಗ್ರಿಮೆಂಟ್ ಸರಿಯಲ್ಲವೆನ್ನುವುದನ್ನು ಕೂಡ ಹೇಳಿದ್ದಾರೆ. ಇದೇನಾಗಿದೆ ಎಂಬುದು ತಮಗೆ ಇದು ಗೊತ್ತಿದೆ. ನೀವು ಅವರು ಮನವಿಯನ್ನು ಮಾಡಿಕೊಂಡಿದ್ದಾರೆ, ಅದಕ್ಕೋಸ್ಕರ ಮುಚ್ಚಿಟ್ಟಿದ್ದೆ ಎಂದರೆ ಮಂತ್ರಿಗಳ ಉತ್ತರ ಇದಲ್ಲ. ಅವರು ಸಾವಿರ ಮನವಿ ಮಾಡಿಕೊಳ್ಳಬಹುದು, ಇವತ್ತು ನೀವು ಈಗಾಗಲೇ ಗ್ರೀನ್ ಬೆಲ್ಟ್, ಅಗ್ರಿಕಲ್ಚರ್ ಜೋನ್ ಎಂದು ಅಪ್ರೂವ್ ಮಾಡಿದ್ದೀರ, ಆ ಸರ್ವೆ ನಂಬರ್ ಸಿಡಿಪಿನಲ್ಲು ತೀರ್ಮಾನವಾಗಿದೆ, ಎಲ್ಲಾ ಅಪ್ರೂವ್ ಆಗಿದೆ, ಅದರ ಪ್ರಕಾರ ಎಲ್ಲಾ ನಡೆಯುತ್ತಿದೆ. ಬಹುಶಃ ಮಂತ್ರಿಗಳು ಹಾರಿಕೆ ಉತ್ತರವನ್ನು ಕೊಡುತ್ತಿರುವುದನ್ನು ನೋಡಿದರೆ, ಇದರಲ್ಲಿ

ಸಂಶಯವಾಗಿರುವುದು ಎದ್ದು ಕಾಣುತ್ತದೆ, ಇದನ್ನು ತನಿಖೆ ಮಾಡಬೇಕು. ಏಕೆಂದರೆ, ಕಮ್ಯುನಿಕೇಷನವರು ಯಾರಿದ್ದಾರೆ, ಖಾಸಗಿಯಾಗಿ ಅವರ ಹೆಸರಿನಲ್ಲಿ ಸುಮಾರು 200 ಕೋಟಿ ರೂಪಾಯಿಗಳ ಆಸ್ತಿಯನ್ನು ಮಾಡಿದ್ದಾರೆ, ಅದು ಕೂಡ ಅವರ ರೆಕಾರ್ಡ್‌ನಲ್ಲಿದೆ, ದಯಮಾಡಿ, ತನಿಖೆಗೆ ಆದೇಶ ಮಾಡಿ. ಇಲ್ಲದಿದ್ದರೆ ನೀವು ಮಾಡಿರುವುದು ಏನು? ಈಗ ಅಗ್ರಿಕಲ್ಚರ್ ಜೋನ್ ಎಂದಿದ್ದ ಮೇಲೆ ಅದಕ್ಕೆ ಯಾವ ರೀತಿಯಾದ ಅಲಿನೇಷನ್ ಕೊಟ್ಟಿದ್ದಾರೆ. ಬಹುಶಃ ಹಿಂದೆ ಇದಕ್ಕೆ ಪೂರಕವಾಗಿ ಒಂದು ಕ್ವಶನ್ ಹಾಕಿದ್ದೆ, ಅದು ಕೃಷಿಗೆ ಸಂಬಂಧಿಸಿದ್ದರಿಂದ ಉತ್ತರ ಕೊಡಲು ಬುಧವಾರ ಕೊಡುತ್ತೇವೆಂದು ಒಂದು ವಾರ ಟೈಂ ತೆಗೆದುಕೊಂಡಿದ್ದಾರೆ, ಇದಕ್ಕಿ ರಿಲೇಟೆಡ್ ಸಬ್ಜೆಕ್ಟ್ ಅದು ಕೂಡ ಇದೆ. ಏಕೆಂದರೆ, ನಿನ್ನೆ ಟಿವಿಯಲ್ಲಿ ನೋಡಿದಾಗ ಅಂದಿನ ಸದನ ಸಮಿತಿಯ ಅಧ್ಯಕ್ಷರು ಮಾತನಾಡುತ್ತಿದ್ದರು, ಇದು ಕೂಡ ಅದರಲ್ಲಿ ಒಂದು ಭಾಗವಾಗಿದೆ. ಸದನ ನಡೆಯುತ್ತಿರುವ ಸಂದರ್ಭದಲ್ಲಿ, ಸಮಿತಿಯ ಅಧ್ಯಕ್ಷರು, ಮಾಜಿ ಶಾಸಕರು ಬಹುಶಃ ಅವರು ನಾನು ವರದಿಯನ್ನು ಹೀಗೆ ಕೊಟ್ಟಿದ್ದೆ ಎಂದು ಹೇಳಿದರೆ ನಮಗೆಲ್ಲರಿಗೂ ಕೂಡ ಅವಮಾನ, ಅದರಲ್ಲಿ ತಾವು ಕೂಡ ಜವಾಬ್ದಾರರು. ಆಡಳಿತ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದಾಗ ನೀವು ಈ ರೀತಿ ಹಾರಿಕೆ ಉತ್ತರವನ್ನು ಕೊಟ್ಟರೆ ಸರಿಯಲ್ಲ, ದಯವಿಟ್ಟು ನಾನು ಮನವಿ ಮಾಡಿಕೊಳ್ಳುತ್ತೇನೆ, ತಾವು ಮಂತ್ರಿಗಳು, ಇದರಲ್ಲಿ ಯಾರೇ ಇರಲಿ ಮುಲಾಜಿಲ್ಲದೇ ಈ ಬಗ್ಗೆ ತನಿಖೆಯಾಗಬೇಕು. ನೂರು ರೂಪಾಯಿಯ ಅಗ್ರಿಮೆಂಟ್ ಪೇಪರ್ ಅನ್ನು ಸರ್ಕಾರ ಒಪ್ಪಿಕೊಳ್ಳುವುದಾದರೆ, ಸರ್ಕಾರಕ್ಕೆ ಎಷ್ಟು ಹಣ ನಷ್ಟವಾಗಿದೆ, ಸ್ಟ್ಯಾಂಪ್ ಡ್ಯೂಟಿ ಎಷ್ಟು ಹೋಗಿದೆ, ಇದರ ಹಿನ್ನೆಲೆಯಲ್ಲಿ ಯಾರ್ಯಾರು ಸೇರಿದ್ದಾರೆ ಎಂಬುದು ಬಯಲಾಗಬೇಕು. ಕನಿಷ್ಟ ಪಕ್ಷ ತನಿಖೆ ಮಾಡಲು ಲೋಕಾಯುಕ್ತಕ್ಕಾದರೂ ಹಾಕಿದರೆ ಸೂಕ್ತ. ಏಕೆಂದರೆ, ಇದರಲ್ಲಿ 2004 ರಿಂದ 4000 ಜನ ಚದರ ಅಡಿ ರೂ. 180 ಗಳಂತೆ ಹಣ ಕಟ್ಟಿರುವ ಸದಸ್ಯರು ಇದ್ದಾರೆ, ಈಗಾಗಲೇ 5 ವರ್ಷಗಳಾಯಿತು, ಅವರ ಗತಿಯೇನಾಗಬೇಕು? ದಯವಿಟ್ಟು ಈ ಬಗ್ಗೆ ಲೋಕಾಯುಕ್ತರಿಂದ ತನಿಖೆ ಮಾಡಿಸಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂ):** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅಗ್ರಿಮೆಂಟ್ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಅದರ ಬಗ್ಗೆ ಮಾಹಿತಿಗಳನ್ನು ಪಡೆದುಕೊಂಡು ನಮ್ಮ ಇಲಾಖೆಯ ಹಿರಿಯ

ಅಧಿಕಾರಿಗಳನ್ನು ಆ ಸಂಸ್ಥೆಗೆ ಕಳುಹಿಸಿ ಕೊಟ್ಟು ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡು ಕಾನೂನು ರೀತಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಎ. ಮಂಜು:** ಮಾನ್ಯ ಅಧ್ಯಕ್ಷರೆ, ನಿಮ್ಮ ಅಡಿಟ್‌ನಲ್ಲಿಯೇ ಇದೆ. ಅಡಿಟ್‌ನಲ್ಲಿರತಕ್ಕಂಥದ್ದಕ್ಕೆ ಮಂತ್ರಿಗಳು ಮತ್ತೆ ಇನ್ನು ಮಾಹಿತಿ ತೆಗೆದುಕೊಳ್ಳಬೇಕೆಂದು ಹೇಳಿದರೆ, ಅವರು ಉತ್ತರ ಸರಿಯಾಗಿ ನೋಡಿಕೊಂಡು ಬಂದಿಲ್ಲ ಎಂದು ಆಯಿತು. ಈ ಪ್ರಶ್ನೆ ಬಹಳ ಸೀರಿಯಸ್ ಇದೆ.

**ಅಧ್ಯಕ್ಷರು:** ಅವರು ಇಷ್ಟು ಹೊತ್ತು ಉತ್ತರ ಕೊಟ್ಟಿದ್ದಾರೆ ಏನು ಮಾಡಬೇಕು ಹೇಳಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:** ಮಾನ್ಯ ಅಧ್ಯಕ್ಷರೆ, ಅಗ್ರೀಮೆಂಟ್ ಪೇಪರ್ ಬಗ್ಗೆ ನಿಮಗೇನು ಶಂಕೆ ಬಂದಿದೆ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

**ಶ್ರೀ ಟಿ.ಬಿ. ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಇದು ಸೊಸೈಟಿಯಲ್ಲಿ ನಡೆಯತಕ್ಕಂತಹ ವ್ಯವಹಾರ ಎಲ್ಲವೂ ಕೂಡ ನೇರವಾಗಿ ಗೊತ್ತಾಗುವುದಿಲ್ಲ. ಆ ಕಾರಣಕ್ಕೋಸ್ಕರ ಒಂದು ಸಾರಿ ಆಕ್ಷೇಪ ಬಂದಂತಹ ಸಂದರ್ಭದಲ್ಲಿ ಕೊನೆ ಪಕ್ಷ ರಿಜಿಸ್ಟ್ರಾರ್‌ರವರಿಂದ enquiry ಮಾಡಿಸಿ. ಇಲ್ಲ ನಿಮ್ಮ ಕಾರ್ಯದರ್ಶಿಯವರಿಂದ enquiry ಮಾಡಿಸಿ. ಅವರು ಮಾಡಿರುವಂತಹ ಇಲ್ಲೀಗಲ್ activityಯನ್ನು legalize ಮಾಡುವುದು ಬೇಡ. ಅದಕ್ಕೋಸ್ಕರ ರಿಜಿಸ್ಟ್ರಾರ್ ಅಥವಾ ಕಾರ್ಯದರ್ಶಿಯವರಿಂದ enquiry ಮಾಡಿಸಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:** ಅಧ್ಯಕ್ಷರೆ, ನಮ್ಮ ಕಾರ್ಯದರ್ಶಿಯವರ ನೇತೃತ್ವದಲ್ಲಿ ಪರಿಶೀಲನೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

## Farmers Loan Waiver

1235 Sri Ramesh Bandisiddegowda A.B. Will the Minister for Co-operation answer this question:

a) What is the amount of farmer's loan waiver of 2005-06 in relation to agriculture credit service co-operative banks;

b) Whether the benefit of loan waiver has reached the farmers fully? What is the result of loan waiver in the State and in Mandya District; (Percentage details be furnished)